Founded 1917 SATYAVADI Regd No·M 1299

ಸತ್ಯವಾದಿ

ಸಂಪುಟ ೨೫ ಸಂಚಿಕೆ ೪೧] ಬುಧವಾರ 17—6—1942 ಎ ಪಿ ಜೈ. [ಎ.ಬಿ ಸೆಕ್ಷನ್ ಒಟ್ಟು 8 ಪುಟ

ಬ್ರಹ್ಮಾಂಡವಾಡ ಬ್ರಿಟಿಷ್ ವಿಮಾನ ದಾಳಿ

ಕಳೆದ ಶನಿವಾರ ೧೦೦೦ ಬ್ರಿಟಿಷ್ ವಿಮಾನಗಳು ಜರ್ಮನಿಯ ಮೇಲೆ ಹೋಗಿ ಅಲ್ಲಿಯ ಕೊಲೋನ್ ಪಾರಿಶ್ರಮಿಕ ಪಟ್ಟಣದ ಮೇಲೆ 3000 ಟನ್ನುಗಳ ಬಾಂಬುಗಳನ್ನು ಹಾಕಿ ಆ ಪಟ್ಟಣವನ್ನು ಪೂರ್ತಿಯಾಗಿ ಸುಟ್ಟು ಬಿಟ್ಟವು ೨೦ ಸಾವಿರ ಜರ್ಮನರು ಮೃತರಾದರು. ೫೪೦೦೦ ಜನರಿಗೆ ಗಾಯಗಳಾಗಿರುತ್ತವೆ. ಬ್ರಿಟಿಷರಿಗೆ 34 ವಿಮಾನಗಳು ನಷ್ಟವಾದವು. ಅದೇ ಪ್ರಕಾರ ೨ನೇ ಸಾರಿ ಎಸ್ಸೆನ್ನು ಎಂಬುವ ಪಟ್ಟಣದ ಮೇಲೆ ದಾಳಿ ಮಾಡಿ ಬಂದವು. ಹೀಗೆ ಒಂದು ತಿಂಗಳು ಜರ್ಮನಿಯ ಮೇಲೆ ವಿಮಾನ ದಾಳಿಗಳಾದರೆ ಜರ್ಮನಿಯ ಪೂರ್ತಿಯಾಗಿ ನಾಶವಾಗಬಲ್ಲದೆಂದು ತಜ್ಞರು ಹೇಳುವರು. ಇನ್ನು ಮೇಲೆ ಇದಕ್ಕಿಂತಲೂ ಹೆಚ್ಚಾದ ಘೋರವಾದ ಬ್ರಿಟಿಷ್ ವಿಮಾನ ದಾಳಿಗಳು ಆಗುತ್ತವೆಂದು ಅಲ್ಲಿಯ ವಿಮಾನಶಾಖೆಯ ಮಂತ್ರಿಗಳು ಹೇಳಿರುವರು. ಎಸ್ಸೀನವ ಹತ್ತಿರ ಪ್ರಪಂಚಕ್ಕೆಲ್ಲಾ ಬಲಿಷ್ಟವಾದ ಕ್ರುಪ್ಪ ಮದ್ದಿನ ಫ್ಯಾಕ್ಟರಿ ಇರುವದು. ಇದು ಹಿಟ್ಲರನ ಪ್ರಾಣದ ಹಾಗೆ ಇರುವದು. ಈ ದಾಳಿಯಲ್ಲಿ ಇನ್ನು ಮೇಲೆ ಅಮೇರಿಕಾ ವಿಮಾನಗಳು ಕೂಡ ಭಾಗವಹಿಸುವವು. ಈ ಉದ್ಯಮದಿಂದ ಜರ್ಮನಿಯ ಮುಂದಿನ ಗತಿ ಏನಾಗಬಲ್ಲದೋ ದೇವರಿಗೆ ಗೊತ್ತು.

——

ಗಾಂಧೀಜಿಯವರ ದಸ್ತಗಿರಿಯೇ?

ಶ್ರೀ ವಲ್ಲಬಾಯಿ ಪಟೇಲರು ಬಾರ್ಡೋಲಿಯಲ್ಲಿ ಮಾಡಿದ ಭಾಷಣವೊಂದರಲ್ಲಿ ಇದು ಸಾಧ್ಯವೆಂದಿರುವರು.

ಜಪಾನರ ಪ್ರಚಂಡ ನಾವಿಕ ನಷ್ಟ

ಕಳೆದ ವಾರದಲ್ಲಿ ಜಪಾನರ ನಾವಿಕ ದಳವೊಂದು ಅಮೇರಿಕಾ ಮಿಡ್ವೆ ದ್ವೀಪವನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶ ಹೋಗಿತ್ತು. ಅಲ್ಲಿ ಈಗ ಜಪಾನರ ನಾವಿಕಾ ದಳಕ್ಕೂ ಅಮೇರಿಕಾದ ನಾವಿಕಾದಳಕ್ಕೂ ಒಂದು ಘೋರ ನಾವಿಕಾ ಯುದ್ಧವು ಜರಗುತ್ತಲಿದೆ. ಆಗಲೇ ಜಪಾನರ ೫ ವಿಮಾನ ವಾಹನಗಳು ನಾಲ್ಕು ಕ್ರೂಯಿಜರಗಳು ೨ ಯುದ್ಧ ಹಡಗುಗಳು ಮತ್ತು ೩ ಇತರ ಹಡಗುಗಳು ಜಲಸಮಾಧಿ ಹೊಂದಿದವು. ಪರ್ಲರೇವಿನ ನಷ್ಟದ ಸೇಡನ್ನು ತೀರಿಸಿಕೊಂಡರೆಂದು ಅಮೇರಿಕಾದ ನಾವಿಕಾಧಿಪತಿಯು ಹೇಳಿದನು. ಪರ್ಲ ಹಾರ್ಬರದಲ್ಲಿ ಆದ ಅಮೇರಿಕಾದವರ ನಷ್ಟಕ್ಕಿಂತಲೂ, ಈ ಮಿಡ್ವೇ ದ್ವೀಪದ ಜಪಾನರ ನಷ್ಟವು ಹೆಚ್ಚಾಗಿರುತ್ತದ್ದೆಂತಲೂ, ಇಷ್ಟರಲ್ಲಿಯೇ ತಾನು ಗಳಿಸಿದ ಸಮುದ್ರಾಧಿಪತ್ಯವನ್ನು ಜಪಾನು ಕಳೆದುಕೊಳ್ಳುವುದರಲ್ಲಿರುವದೆಂದು ಇಂಗ್ಲೆಂಡಿನಿಂದ ವಾರ್ತೆಗಳು ಬಂದಿರುತ್ತವೆ.

——

ಮುತ್ತಿಟ್ಟದ್ದಕ್ಕೆ ಸಜಾ!

ಬೋಸ್ಟನ್ನಿನ ಒಬ್ಬ ಪೋಲೀಸಿನವನು ಅಲ್ಲಿಯ ಮೋಟಾರು ನಡೆಸುತ್ತಿದ್ದ ಹೆಂಗಸಿನ ಮುತ್ತು ಮೂರು ವರೆ ಮೈಲಿ ಉದ್ದದಷ್ಟೆಂದಿರುವನು. ಒಬ್ಬ ಹೆಂಗಸು ಮುತ್ತು ಕೊಡುತ್ತಾ ರಾತ್ರೆ ಗಂಟೆಗೆ 42 ಮೈಲಿ ವೇಗದಂತೆ ಮೋಟಾರು ಬಿಡುತ್ತಿದ್ದಳು. ಜಡ್ಜಿಯು ಇವಳಿಗೆ 7 ದಿವಸ ಸಜಾ ವಿಧಿಸಿ ಆ ಕಾಲದಲ್ಲಿ ಜೇಕಾದಷ್ಟು ಮುತ್ತು ಕೊಡುತ್ತಿರ್ದು ಈ ಪದ್ಧತಿಯಿಂದ ಬಿಡುಗಡೆ ಮಾಡಿಕೋ ಎಂದು ಎಚ್ಚರಿಸಿದನು.

ಯುದ್ಧ ಸಮಾಚಾರಗಳು

ಜಪಾನಿನವರು ಪಿಸಿಫಿಕ್ ಸಾಗರದ ಮಿಡ್ವೇ ದ್ವೀಪದ ಮೇಲೆ ದುಡೆಯಾತ್ರೆ ನಡೆಸುತ್ತಿದ್ದುವುದು ರಷ್ಯಾ ಮೇಲೆ ದಂಡೆಯಾತ್ರೆ ನಡೆಸುತ್ತಿರುವ ಪೀಠಿಕೆಯೆಂದು ಊಹಿಸಲಾಗಿದೆ.

೦ ೦ ೦

ರಷ್ಯಾ ಇಂಗ್ಲೆಂಡುಗಳ ಹೊಸ ಒಪ್ಪಂದವಾಗಿದೆ. ಇದರಿಂದ ೨ನೇ ಯುದ್ಧರಂಗವೊಂದು ಪ್ರಾರಂಭವಾಗಬಹುದು.

೦ ೦ ೦

ಖಾರ್‌ಕೋವ್ ರಂಗದಲ್ಲೂ ರಷ್ಯನರು ಪ್ರಬಲವಾಗಿ ಹೋರಾಡುತ್ತಾ ಶತ್ರುಗಳನ್ನು ಎದುರಿಸಿ ಹೋರಾಡುತ್ತಿರುವರು.

ಮುತ್ತಿನ ಸುರಿಮಳೆ

ಸಿನಿಮಾತಾರೆ ಮಿಸ್ ಬಲಿವಿಯಾಡಿ ಹವಿಲ್ಯಾಂಡ್ ಎಂಬಾಕೆಗೆ ಹತ್ತು ಸಾವಿರದ ಸಾರಿ ಮುತ್ತಿಡಲಾಗಿದೆ. ಆ ಬಳಗನ್ನು ಎ. ರಲ್‌ಸ್ಟಾ ಎಂಬುವನು 401 ಸಾರಿ, ಡಿಕ್ ಪೆವೆಲ್ 90 ಸಾರ್ತಿ ಲೆಸ್ಲಿ ಹೂವರ್ಡ್ 71 ಸಾರಿ, ಜೇಮ್ಸ್ ಕಾಗ್ನೆ 31 ಸಾರಿ, ಡೆವಿಡ್ ನಿವೆನ್ 22 ಸಾರಿ ಮುತ್ತಿಟ್ಟುಕೊಂಡಿದ್ದಾರೆ.

ಸೆಬಾಸ್ಟ್‌ಪೂಲನ್ನು ವಶಪಡಿಸಿಕೊಳ್ಳಲು ನಾಜಿಗಳ ಘೋರಪ್ರಯತ್ನ ನಡೆಯಲಿಲ್ಲ. ಇಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ನಾಜಿಗಳಿಗೆ ತುಂಬಾ ಸಾವುನೋವುಗಳಾಗುತ್ತಿದೆ.

೦ ೦ ೦

ಸಾಲೊಮನ್ ದ್ವೀಪಸ್ತೋಮದಲ್ಲಿರುವ ಟುಲಾಗಿ ಬಂದರಿನ ಮೇಲೆ ಅಮೆರಿಕ್ಕ ಬಾಂಬರ್ ವಿಮಾನಗಳು ನಡೆಸಿದ್ದ ಬಲವಾದ ಧಾಳಿಯಲ್ಲಿ ಜಪಾನೀ ನೌಕಾ ತಂಡಕ್ಕೆ ಬಹಳ ನಷ್ಟವನ್ನುಂಟು ಮಾಡಿದೆ.

೦ ೦ ೦

ಅಲ್ಯೂಷಿಯನ್‌ಗೆ ಜಪಾನರು ಎರಡು ಕಡೆಗಳಲ್ಲಿ ಬಂದಿಳಿದಿದ್ದಾರೆ ಎಂಬುದಾಗಿ ಸಂಯುಕ್ತ ಸಂಸ್ಥಾನದ ನೌಕಾ ಇಲಾಖೆಯು ಪ್ರಕಟಿಸುತ್ತದೆ.

೦ ೦ ೦

ರಷ್ಯಾ ಮೇಲೆ ಜಪಾನು ಬಿದ್ದರೆ ಚೀನಾವು ತನ್ನ ಸರ್ವ ಬಲದಿಂದ ಪ್ರತಿಧಾಳಿ ನಡೆಸುವುದು.

೦ ೦ ೦

ಆಸ್ಟ್ರೇಲಿಯಾ ಮೇಲೆ ಪುನಃ ಸಬಾಮೆರ್ಟನ್ ಧಾಳಿ.

Travel by the Transport Motor Service

FOR EFFICIENCY & COMFORT

The Mysore Permanent Fund, Ltd.,

NOTICE

Proceedings of the III Ordinary General Body Meeting held at the Registered Office of the Company at Mysore, at 8-30 a.m. on Sunday the 17th May 1942.

I. (i) Resolved that the Mysore Permanent Fund Ltd., Mysore be wound up Voluntarily immediately, & further.

(ii) Resolved that Mr. B. A. Krishnaswamy Iyengar B.A.,LL.B., Pleader Mysore, be appointed as the Liquidator for carrying on the winding up of the Fund and his remuneration be fixed at 5 p.c.

(Sd) B. A. Krishnaswamy Iyengar
Chairman

ಈ ವಾರದ ಕಥೆ

ಮಾನವ ಹೃದಯ

ಲೇಖಕರು—ಎಸ್. ಎಂ. ಸರೋಜಮ್ಮಾಳ್ ಒಂಟಿಕೊಪ್ಪಲ್, ಮೈಸೂರು.

ಪ್ರಪಂಚದಲ್ಲಿ ಅನೇಕ ತರಹ ಜನಗಳುಂಟು. ಅವರಲ್ಲಿ ಕೆಲವರು ಇತರರನ್ನು ಅನಾ ಯವಾಗಿ ನಿಂದಿಸಿ, ದೂಷಣೆಗೆ ಗುರಿಮಾಡಿ, ಎಷ್ಟೋ ಜನರ ಜೀವನವನ್ನೇ ಹಾಳುಮಾಡಿಬಿಡುತ್ತಾರೆ. ಇಂತಹ ಒಂದು ಸನ್ನಿವೇಶವನ್ನು ಒಂದು ಕಥೆಯ ರೂಪದಲ್ಲಿ ವಾಚಕರಿಗೆ ತಿಳಿಸುತ್ತೇನೆ.

ಶ್ಯಾಮರಾಯರು ಭಾರಿ ಜಮೀನ್ದಾರರು. ಇವರ ಮೊದಲನೆ ಕುಟುಂಬವು ತಮ್ಮ ನೆನಪಿಗಾಗಿ ಒಂದು ಪುತ್ರನನ್ನು ಬಿಟ್ಟು ಪರಂಧಾಮನೈದಿದರು. ಈಗ ಎರಡನೆ ಕುಟುಂಬದ ಶಾರದಮ್ಮನವರು ಬಹಳ ಅಕ್ಕರೆಯಿಂದ ಮಲಮಕ್ಕಳನ್ನೂ ತಮ್ಮ ಮಕ್ಕಳೊಂದಿಗೆ ತಮ್ಮವುಗಳಂತೆಯೇ ಸಾಕುತ್ತಿದ್ದರು. ಮಲಮಗನಾದ ಶ್ರೀಧರನೇ ನಮ್ಮ ಕಥಾನಾಯಕನು.

ಶ್ರೀಧರನು ಚಿಕ್ಕಂದಿನಲ್ಲಿಯೇ ಬಹಳ ಮೇಧಾವಿಯಾಗಿಯೂ ಸರಳಸ್ವಭಾವದವನಾಗಿಯೂ ಇದ್ದನು, ಪ್ರಪಂಚಜ್ಞಾನದಿಂದ ವಿಪರೀತ ತುಂಬಿ ಆಗತಾನೇ ಕಾಲೇಜಿನ ಮೆಟ್ಟಿಲನ್ನು ಹತ್ತುತ್ತಿದ್ದನು. ಊರಿನಲ್ಲಿರುವ ಅನೇಕ ಗಣ್ಯಮನುಷ್ಯರು ಅವನ ಸ್ನೇಹಿತರಾಗಿದ್ದರು. ಅವನಲ್ಲಿದ್ದ ವಿಶೇಷ ಗುಣವೆಂದರೆ ಎಲ್ಲರನ್ನೂ ತನ್ನ ಮಧುರ ವಾಕ್‌ಚಾತುರ್ಯದಿಂದ ಆಕರ್ಷಿಸುವ ಶಕ್ತಿ ಇತ್ತು. ಕಷ್ಟದಲ್ಲಿರುವವರಿಗೆ ಸಹಾಯಮಾಡುವುದರಲ್ಲಿ ಸೊಂಟಕಟ್ಟಿ ನಿಲ್ಲುತ್ತಿದ್ದನು ಅವನಿಗೆ ಇಲ್ಲ ಅಗುವುದಿಲ್ಲ ಎಂಬ ಪದಗಳೇ ಗೊತ್ತಿರಲಿಲ್ಲ. ಈ ಗುಣಗಳಿಂದ ಇವನು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದನು.

ಇವುಗಳಿಂದ ಶ್ರೀಧರನಿಗೆ ಅನೇಕ ಸ್ನೇಹಿತರುಗಳಾದರು. ಇವುಗಳ ಪೈಕಿ ಕೆಲವು ಸ್ನೇಹಿತೆಯರೂ ಆದರು, ಇವರುಗಳಲ್ಲಿ ಲತಾಂಗಿಯನ್ನು ಕಂಡರೆ ಶ್ರೀಧರನಿಗೆ ಬಹಳ ಸ್ನೇಹ. ಶ್ರೀಧರನು ಎಲ್ಲರಲ್ಲಿಯೂ ಒಳ್ಳೇ ಭಾವನೆಯಿಂದಲೇ ಸ್ನೇಹಹಸಿಡುತ್ತಿದ್ದನು. ಪ್ರಕೃತ ಲತಾಂಗಿ ಮತ್ತು ಶ್ರೀಧರರು ಪವಿತ್ರವಾದ ಭಾತೃ ಸ್ನೇಹದಿಂದ ಬಂಧಿಸಲ್ಪಟ್ಟಿದ್ದರು. ಆದರೆ ವಿಧಿನಿಯಮವು ವ್ಯತಿರಿಕ್ತವಾಗಿದ್ದಿತು. ಜನರು ಇವರ ಅನ್ಯೋನ್ಯತೆಯನ್ನು ನೋಡಿ ಸಹಿಸಲಾರದೆ ಇಲ್ಲಸಲ್ಲದ ಅಪವಾದಗಳನ್ನು ಹೊರಿಸಿದರು. ಈ ಸಮಾಚಾರವು ಕಾಲಕ್ರಮೇಣ ಶಾರದಮ್ಮನ ಕಿವಿಗೆ ಬಿತ್ತು. ಅವರು ಶ್ಯಾಮರಾಯರಿಗೆ ತಿಳಿಸಿದರು. ಇದನ್ನು ಕೇಳುತ್ತಲೇ ಅವರು ಕಾಲರುದ್ರನಂತೆ ಕಿಡಿಕಿಡಿಯಾಗಿ ಮಗನನ್ನು ನಿಂದಿಸಿ ಹೊರಕ್ಕೆ ಹೋಗದ ಹಾಗೆ ರೂಮಿನಲ್ಲಿ ಕೂಡಿ ಹಾಕಿದರು. ಲತಾಂಗಿಗೆ ಈ ಸಮಾಚಾರವು ತಿಳಿಯಿತು. ಇದನ್ನು ಕೇಳುತ್ತಲೇ ಅವಳು ಮೂರ್ಛೆಬಿದ್ದು ನಂತರ ಚೇತರಿಸಿಕೊಂಡು ಹುಚ್ಚಳಂತೆ ಜನರನ್ನು ನಿಂದಿಸುತ್ತಾ ಆನ್ನಾಹಾರಗಳನ್ನು ತೊರೆದು ಸದಾ ದೇವರನ್ನು ತನ್ನ ಸಹೋದರನನ್ನು ಈ ಜನರ ಆಕ್ಷೇಪಣೆಗಳಿಂದ ಬಿಡಿಸಬೇಕೆಂದು ಪ್ರಾರ್ಥಿಸುತ್ತಿದ್ದಳು. ಶ್ರೀಧರನಾದರೋ ಸಹೋದರಿಯನ್ನು ನೋಡದೆ ವಿನ್ನಮನಸ್ಕನಾಗಿ ಜನರನ್ನು ದೂಷಿಸುತ್ತಾ ಮಾರನೇ ದಿನವೇ ತಡೆಯದೆ ಬೇಗನೆ ಹೋಗಿ ಲತಾಂಗಿಯನ್ನು ಕಂಡು ಎಲ್ಲಾ ಸಂಗತಿಯನ್ನೂ ತಿಳಿಸಿದನು. ಮತ್ತು ಮೇಲಿನ ಅಪವಾದವನ್ನು ದೂರಮಾಡಬೇಕೆಂದು ಪ್ರಯತ್ನಿಸತೊಡಗಿದರು.

ಹೀಗಿರಲು ಒಂದು ದಿನ ಶ್ರೀಧರನು ಜನರ ಮಾತುಗಳನ್ನು ಕೇಳಲಾರದೆ ರಾತ್ರಿಯಲ್ಲಿ ಎದ್ದು ಒಂದು ಕಾಗದವನ್ನು ತಂದೆಯವರಿಗೆ ಬರೆದು ಅದನ್ನು ಅವರ ಮೇಜಿನ ಮೇಲಿಟ್ಟು ಮನೆಯಂದ ಪರಾರಿಯಾಗಿ ಅಲ್ಲಿ ದೂರದಲ್ಲಿದ್ದ ಒಬ್ಬ ಸ್ನೇಹಿತನ ಮನೆಯಲ್ಲಿ ವೇಷ ಮರೆಸಿಕೊಂಡು ಮುಂದೇನು ನಡೆಯುವುದೆಂಬುದನ್ನು ನಿರೀಕ್ಷಿಸುತ್ತಿದ್ದನು.

ಮಾರನೇ ದಿನ ಶಾಮರಾಯರು ಎದ್ದು ತಮ್ಮ ಹೆಸರಿಗೆ ಇದ್ದ ಯಾವದೋ ಕಾಗದವನ್ನು ಕಂಡು ಅದನ್ನು ಒಡೆದು ನೋಡಲು ಅದರಲ್ಲಿ ಈ ರೀತಿ ಇತ್ತು.—ಪೂಜ್ಯ ತೀರ್ಥರೂಪುಗಳಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರಗಳು. ತಮ್ಮ ಬಾಲಕನ ಉದ್ಗಟತನವನ್ನು ಕ್ಷಮಿಸಬೇಕು. ಪವಿತ್ರವಾದ ಭಾತೃ ಸ್ನೇಹಹೊಂದಿದ್ದವರಲ್ಲಿ ತಾತಾವು ವಿಚಾರ ಮಾಡದೆ ನನ್ನನ್ನು ದೂಷಿಸಿ, ಅಪವಾದವನ್ನು ಹೊರಿಸಿದಿರಿ. ನಿಮ್ಮ ಮಾತುಗಳನ್ನು ತಡೆಯದೇ ನಾನು ಈ ರೀತಿ ವರ್ತಿಸಿದ್ದೇನೆ. ನನ್ನನ್ನು ಹುಡುಕಿಸುವ ಪ್ರಯತ್ನದಲ್ಲಿ ವೃಥಾ ಕಾಲ ಕಳೆಯಬೇಡಿರೆಂದು ಬೇಡಿಕೊಳ್ಳುತ್ತೇನೆ. —ಇತಿ, ತಮ್ಮ ಪುತ್ರ ಶ್ರೀಧರ.

ಈ ಕಾಗದವನ್ನು ನೋಡುತ್ತಲೇ ಶಾಮರಾಯರು ಸಿಡಿಲುಬಡಿದಂತವರಾಗಿ ತಮ್ಮ ದುಡುಕಿನ ಕೆಲಸಕ್ಕೆ ಪಶ್ಚಾತ್ತಾಪಪಡತ್ತಾ ನೆಲಕ್ಕೆ ಕುಸಿದುಬಿದ್ದರು. ಮಾರನೇ ದಿನವೇ ಎಲ್ಲಾ ಪತ್ರಿಕೆಗಳಲ್ಲೂ ತಮ್ಮ ಮಗನನ್ನು ಪತ್ತೆಮಾಡಿಕೊಟ್ಟವರಿಗೆ ಬಹಳ ಬಹುಮಾನ ಕೊಡುವುದಾಗಿ ಹಾಕಿಸಿದರು. ಮಗನನ್ನು ಕಾಣುವವರೆಗೂ, ಆಹಾರವನ್ನು ಸೇವಿಸುವುದಿಲ್ಲವೆಂದು ಸದಾ ಮಗನ ಹಂಬಲದಲ್ಲೇ ಇದ್ದರು. ಕೆಲವು ದಿನಗಳಲ್ಲೇ ಮನೋರೋಗದಿಂದ ಹಾಸಿಗೆ ಹಿಡಿದರು. ಶ್ರೀಧರನಾದರೋ ತಂದೆಯೆಂಬ ವಾತ್ಸಲ್ಯದಿಂದ ಈ ವಿಚಾರ ತಿಳಿದ ತಕ್ಷಣವೇ ಮನೆಗೆ ಓಡಿಬಂದು ತಂದೆಯ ಪಾದಗಳನ್ನು ಹಿಡಿದು ತನ್ನ ತಪ್ಪನ್ನು ಮನ್ನಿಸಬೇಕೆಂದು ಬೇಡಿಕೊಂಡನು.

ವಿನೋದಲಹರಿ

ರಾಮರಾಯರು—ಭೀಮರಾಯರೇ! ಯಾವಾಗ ನಿಮ್ಮ ಮಗಳ ಮದುವೆ?

ಭೀಮ— ಅನುಕೂಲವಿನ್ನೂ ಬರಲಿಲ್ಲವಪ್ಪಾ! ಸಾಲಂಕೃತ ಕನ್ಯಾದಾನ ಮಾಡಲು.

ರಾಮ—ವರನು ಸಿಕ್ಕಲಿಲ್ಲವೇನು?

ಭೀಮ—ವರನು ಸಿದ್ಧವಾಗಿದ್ದಾನೆ. ಕೆಲಸಕಾರ್ಯಗಳನ್ನು ಮಾಡುವವರೂ ಇದ್ದಾರೆ. ಎಲ್ಲಾ ಸರಿ. ಆದರೆ—

ರಾಮ—ಸಾಲಂಕೃತ ಕನ್ಯಾದಾನ ಮಾಡಲಿರುವವರಿಗೆ ಕೊರತೆ ಏನಿದೆ? ನಗನಾಣ್ಯಗಳೂ ಸಿದ್ಧವಾಗಿರಬೇಕಷ್ಟೆ.

ಭೀಮ— ಅದೇ ನಾನೂ ಹೇಳಬೇಕೆಂದಿದ್ದುದು. ಸಾಲಂ= ಸಾಲವನ್ನು, ಕೃತಮಾಡಿ ಕನ್ಯಾದಾನ=ಮದುವೆ ಮಾಡಬೇಕೆಂದಿರುವೆ.

ರಾಮ—ಈಗ ಅರ್ಥವಾಯಿತು ಸ್ವಾಮಿ. ನಮ್ಮ ಉಪಾಧ್ಯಾಯರು ಸ-|-ಅಲಂಕೃತ = ಸಾಲಂಕೃತ ಎಂಬ ಪದವಿಭಾಗವನ್ನು ತಿಳಿಸಿದ್ದರು. ಆದುದರಿಂದ ನಿಮ್ಮ ಮಾತು ಅರ್ಥವಾಗಿರಲಿಲ್ಲ. ಕ್ಷಮಿಸಬೇಕು

ಮಗನ ಮುಖವನ್ನು ನೋಡುತ್ತಲೇ ಶಾಮರಾಯರಿಗೆ ಅತ್ಯಂತ ಸಂತೋಷವಾಯಿತು. ದೇವರನ್ನು ನಾನಾ ಬಗೆಯಲ್ಲಿ ಕೊಂಡಾಡಿದರು. ಶ್ರೀಧರನು ಎಲ್ಲಾ ವಿಚಾರವನ್ನೂ ತಿಳಿಸಿದನು. ಶಾಮರಾಯರು ಮಗನ ಬುದ್ಧಿ ತಾವು ದುಡುಕಿ ಅವನ ಮನಸ್ಸನ್ನು ನೋಯಿಸಿದ್ದಕ್ಕೆ ಕ್ಷಮೆ ಬೇಡಿದರು. ಲತಾಂಗಿಯನ್ನು ಕರೆಸಿ ಪಕ್ಕದಲ್ಲಿ ಕೂರಿಸಿಕೊಂಡು ಕ್ಷಮಾಪಣೆ ಕೇಳಿಕೊಂಡರು. ಲತಾಂಗಿಯು ಶಾಮರಾಯರಿಗೆ ನಮಸ್ಕರಿಸಿ ತಾವು ನಮಗೆ ಒಳ್ಳೇ ನಡತೆ ಕಲಿಸಿದಿರಿ, ಅದರಲ್ಲಿ ತಪ್ಪೇನು, ಎಂದಳು. ಶಾಮರಾಯರು ಲತಾಂಗಿಯ ವಾಕ್ಚಾತುರ್ಯವನ್ನು ಕಂಡು ಬಹಳವಾಗಿ ಮೆಚ್ಚಿದವರಾಗಿ. ಕೂಡಲೇ ಹೋಗಿ ಲತಾಂಗಿಯ ತಂದೆತಾಯಿಗಳಲ್ಲಿ ಅವಳ ಮದುವೆ ವಿಚಾರ ಪ್ರಸ್ತಾಪಮಾಡಿ ಶ್ರೀಧರನಿಗೆ ಲತಾಂಗಿಯನ್ನು ಶ್ರೀಧರನಿಗೆ ತುದುಕೊಂಡರು.

ಈಗಲೂ ರಾಯರು ಶ್ರೀಧರ ಲತಾಂಗಿಯರ ಪ್ರೇಮಮೂರ್ತಿಯಾಗಿ ಜನಿಸಿರತಕ್ಕ ಆನಂದನನ್ನು ಎತ್ತಿಕೊಂಡು ಅದರ ಮುಂದೆ ಶ್ರೀಧರ ಲತಾಂಗಿಯರನ್ನು ಹಿಂದೆ ನೋಯಿಸಿದ್ದನ್ನು ನೆನೆಸಿಕೊಂಡು ಎಳೇಮಗುನಂತೆ ಅಳುತ್ತಾರೆ.

ಲೇಖಕರಿಗೆ ಸೂಚನೆ

ಚೆನ್ನಾಗಿರುವ ಮತ್ತು ಚಿಕ್ಕದಾದ ಕಥೆಗಳನ್ನು ಯಾರಾದರೂ ಕಳುಹಿಸಿದಲ್ಲಿ ಪ್ರಕಟಿಸುತ್ತೇವೆ. ಸಂಪಾದಕ

ವಿನೋದರಂಜಿನಿ ನಂ. 6, ಬಹುಮಾನ ರೂ. 150

ಮೊದಲನೆ ಬಹುಮಾನ ರೂ. 90. ಇತರ ಬಹುಮಾನ ರೂ. 60.

ಪ್ರವೇಶಧನ 1 ಉತ್ತರಕ್ಕೆ 3 ಆಣೆ, 4 ಉತ್ತರಗಳಿಗೆ 8 ಆಣೆ, ಉತ್ತರ ತಲಪಿಸಲು ಕಡೇ ತಾ. 6-7-42

ಸರಿಯಾದ ಉತ್ತರ 8—7—42 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು.

ನಿಬಂಧನೆಗಳು ಮಾಮೂಲಿನಂತೆ. ಎಲ್ಲರೂ ಮ್ಯಾನೇಜರ ತೀರ್ಮಾನಕ್ಕೆ ಬದ್ಧರಾಗಿರಬೇಕು

ವಿನೋದರಂಜಿನಿ 5 C|o ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು

ಮೈಸೂರಿನವರು ಲ್ಯಾಂಸ್‌ಡೌನ್ ಬಜಾರಿನಲ್ಲಿರುವ ಮೊಕ್ತಾರ್ ಕಂಪೆನಿಯಲ್ಲಿ ಕೊಡಬಹುದು.



ಎಡದಿಂದ ಬಲಕ್ಕೆ—1 ಇದರ ಮೇಲೆ ಅಭಿಮಾನವಿಲ್ಲದವರು ಅತಿ ವಿರಳ. 5 ಒಂದು ವಿಧದ ಜಮಖಾನು. 6 ಯುದ್ಧದಲ್ಲಿ ಹೊಸ ಹೊಸ "ಇದಕ್ಕೆ" ಏನು ಕಡಮೆ 8 ಈತನಿಗೆ ಹೊತ್ತುಹೊತ್ತಿಗೆ ಸರಿಯಾಗಿ ಊಟೋಪಚಾರಗಳು ದೊರೆಯುವುದು ದುರ್ಲಭವಲ್ಲವೇ ?

ಮೇಲಿನಿಂದ ಕೆಳಕ್ಕೆ—1 ಮನುಷ್ಯ 2. ನಾವು ಕೆಲಸಗಳನ್ನು — ವಾಗಿ ಮಾಡಬೇಕು. 3 ಜನರ ಯೋಗ್ಯತೆಯನ್ನು ಅವರ "ಇದರ" ಮೇಲೆ ಊಹಿಸಬಹುದು. 4 ದೇವಸ್ಥಾನ (ತಾರುಮಾರಾಗಿದೆ). 6 ಇದನ್ನು ಮಾಡಿದವರನ್ನು ಮೆಚ್ಚುವುದಕ್ಕಾಗುವುದಿಲ್ಲ. 7 ಇದು ಬಾದಾಗ ವ್ಯತ್ಯಾಸಗೊಳ್ಳದವನೇ ನಿಜವಾದ ಮಾನವನು. 9 ಇದು ಮನುಷ್ಯನ ಶರೀರದಲ್ಲಿದೆ (ಹಿಂದುಮುಂದಾಗಿದೆ). 10 ಒಡವ.

ಹೆಸರು ಕೂ. ನಂ

ವಿಳಾಸ ಪೊ. ಆ. ನಂ.

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು

ಮೈಸೂರ್ ಸ್ಯಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

ಸಿಂಧು ಪ್ರಾಂತದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಹೂರರನ್ನು ಅಡಗಿಸಲಿಕ್ಕೆ ಸೈನಿಕ ಶಾಸನವನ್ನು ಅಲ್ಲಿ ಜಾರಿ ಮಾಡಿರುವರು.

Edited, Printed & published by M.S. Krishna Rao, at the Satyavadi Press, Chamaraja Agrahar, Mysore.

ಈ ವಾರದ ಭವಿಷ್ಯ

ಮೇಷ

ಸ್ವಲ್ಪ ದೇಹಾಲಸ್ಯವಾದೀತು. ಅಧಿಕಾರಿವರ್ಗದಿಂದ ಸಹಾಯವಿದೆ. ಸಂಸಾರಸುಖವಿದೆ. ಸ್ವಲ್ಪ ಧನಾಗಮನವಿದೆ.

ವೃಷಭ

ನಿಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳುತ್ತಿವೆ. ಸ್ವಪರಜನರ ಸಹಾಯವುಂಟು.

ಮಿಥುನ

ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಸಾಲಮಾಡಬೇಡಿ. ಜನರಲ್ಲಿ ಅಪನಾದ ಬರಕೀತು, ಜಾಗರೂಕತೆಯಿಂದಿರಿ,

ಕರ್ಕಾಟಕ

ಮಧ್ಯಮ ಫಲ. ಉತ್ಸಾಹಕಾರ್ಯಗಳು ತಕ್ಕ ಮಟ್ಟಿಗೆ ಸಿದ್ಧಿಸುವುವು. ಸ್ವಲ್ಪ ಧನಾಗಮನವಿದೆ.

ಸಿಂಹ

ನಿಮಗೆ ಒಳ್ಳೇ ಅನುಕೂಲ ಕಾಲ. ಜನರಲ್ಲಿ ಮಾನಮರ್ಯಾದೆ. ಧನಾರ್ಜನೆ, ಸಂಸಾರಸುಖ ಚೆನ್ನಾಗಿದೆ.

ಕನ್ಯಾ

ನೀವೂ ವಿತಕ್ಕೂ ಅಳಬೇಕಾಗಿಲ್ಲ. ನಿಮ್ಮ ಸ್ಥಿತಿ ಎಲ್ಲಾ ವಿಷಯದಲ್ಲಿಯೂ ಉತ್ತಮಗೊಳ್ಳುವುದು.

ತುಲಾ

ನಿಮಗೆ ಗ್ರಹಬಲ ಹರಿದಂತಿದೆ. ಎಲ್ಲಾ ಅನುಕೂಲಗಳೂ ದೊರೆಯುವುದು.

ವೃಶ್ಚಿಕ

ಮಧ್ಯಮ ಫಲ. ಎಲ್ಲಾ ವಿಚಾರಗಳಲ್ಲಿಯೂ ಹುಷಾರಿನಿಂದ ವರ್ತಿಸುವುದು ಒಳ್ಳೇದು.

ಧನು

ಒಳ್ಳೇ ಅನುಕೂಲ ಕಾಲ. ಧನಾಗಮನವೂ ಒಂಥುಮಿತ್ರರ ಸಹಾಯವೂ, ಕೆಲಸಕಾರ್ಯಗಳಲ್ಲಿ ಜಯವೂ ಚೆನ್ನಾಗಿದೆ.

ಮಕರ

ತಕ್ಕಮಟ್ಟಿಗೆ ಅನುಕೂಲವಾದರೂ, ನಿಮ್ಮ ಇಚ್ಛೆಯೆಲ್ಲಾ ಈಡೇರುವುದಿಲ್ಲ.

ಕುಂಭ

ಯಶಸ್ಸು, ಧನ ನಿವ ಗೆ ಒದಗುವುದು. ಕೆಟ್ಟ ಜನರ ಸಹವಾಸದಿಂದ ದೂರವಿರಿ

ಮೀನ

ಎಲ್ಲಾ ವಿಷಯಗಳಲ್ಲೂ ತಕ್ಕಮಟ್ಟಿಗೆ ಅನುಕೂಲವಿದೆ.

ಹಸುವಿನ ಹಾಲು ಶ್ವೇತ ಕುಷ್ಠವ್ಯಾಧಿಗೆ ಅಮೂಲ್ಯವಾದ ಔಷಧಿಯೆಂದೂ, ಕೆಲವು ವೇಳೆಗಳಲ್ಲಿ ಆ ವ್ಯಾಧಿಯು ಈ ಚಿಕಿತ್ಸೆಯಿಂದ ಗುಣವಾಗದಿದ್ದರೂ ಅದರ ಭೀಕರತೆಯು ತಗ್ಗುವುದೆಂದೂ ಡಾ|| ಸರ್ತ್ಕಾರವರು ಅಭಿಪ್ರಾಯಪಟ್ಟಿರುವರು. ಡಾ|| ಮೂರ್‌ರವರ ಅಭಿಪ್ರಾಯವೇನೆಂದರೆ—ಶ್ವೇತಕುಷ್ಠವ್ಯಾಧಿಯಿಂದ ನರಳುತ್ತಿರುವವರು ದಿನಂಪ್ರತಿ ಎರಡು ಸೇರು ಹಾಲು ಕುಡಿಯುವದು ಉತ್ತಮವಾದದ್ದೆಂದು.

ಎಲ್ಲಿರುವೆ ಬಾರಮ್ಮ

(ಲೇ.—ದಾನನ ಶಿವಲಿಂಗನಗೌಡ, ಮಿಂಚೇರಿ)

ಬಾರಮ್ಮ ಕನ್ನಡದ ತಾಯೇ ;
ಎಲ್ಲಿರುವೆ ಬಾರಮ್ಮ !
ಎನ ಮನಸು ಕಳವಳಿಸಿ ಕನವರಿಸುತಿದೆ
ನಿನಾಗಮನಕಾಗಿ : ಹಗಲಿರಳು ಹಾ
ತೊರೆದು ಜೀವ ಕುಗ್ಗಿ ಸೊರಗುತಿದೆ ;
ಒಮ್ಮೊಮ್ಮೆ ಹಿಗ್ಗಿಗ್ಗಿ ನಲಿದು ಉಬ್ಬುತ್ತಿದೆ
ಓ ತಾಯೇ ! ಕತ್ತುರಿಯ ಕನ್ನಡದ ತಾಯೆ ! !

ಕನ್ನಡನಾಡು ನುಡುವಿನಲಿ ಕನ್ನಡದ ಕಲಾ
ಸೌಂದರ್ಯವನು ಸುರಿಸುತಿಹ ತಾಯೆ !
ಬಾರಮ್ಮ ಬಡ ಭಾರತರ ಬೆಳಗಲಿಕೆ
ನಿನಗಾಗಿ ಕಾದಿಟ್ಟಕನವರಿಪ ಹೃದಯಕ್ಕೆ
ಸಂತಸವಸೂಸಿ ಅಬ್ಬರಿಸಿ ಉಬ್ಬಿಹಿಗ್ಗಿಸು ತಾಯೆ!

ಫಲಭಾರದಿಂ ಜಗ್ಗುತಿಹ ಬನದಲ್ಲಿ,
ಜಲವಿರ್ಪ ಕೊಳದಲ್ಲಿ, ಹಂಗೊಳಿಪ
ಸುಮಮಧ್ಯದಲಿ, ತನಿರಸವನೀವ
ತನುಗಾಳಿಯಲಿ, ಕೇಳುತಿದೆ ನಿನ್ನ
ಸವಿನುಡಿಯ ನಗೆಯು ಇಂತಿರ್ಪ
ಬೆಡಗಿನಲಿ ನೀಂ ಸುಳಿಯೆಯೆ
ಒಡ ಭಾರತರ ಬಾಗಿಲೊಳಗೆ ?

ಎಳೆಹುಲ್ಲ ಹಾಸಿನಲಿ ಕರಿಯ
ಕೋಗಿಲೆಯ ಕಂಠದಂತೆ
ಸುಖ ಗಾಯನವ ಮಾಡುತಿಹೆ
ಬೆಳೆಸುತಿಹೆ ಮೃಗಪಕ್ಷಿಗಳ
ಸ್ನೇಹವನು ಕನವರಿಸುತಿಹ
ಭಾರತರ ಅತ್ಮಕ್ಕೆ ಅನುರಾಗ
ಬೇಡವೇ ? ಕನ್ನಡದ ವೈಭವದ
ಸಿರಿಯೆ ! ಶಾಂತಿ, ಸಂತುಷ್ಟಿಯ
ನೀಯುತಿಹ ತಾಯೆ ! ಹೂಬಿಸಿಲು
ಹೂಗಳನು ಮುದ್ದಾಡಿ ಕುಣಿಯುತಿಹ
ಸರಸತಿಯೆ ! ಜೀವನದ ಬೇಸರವ
ಮೈಮರೆತು ಮೆರೆಯುತಿಹ ತಾಯೆ ! !

ನಿನಗೆಲ್ಲಿಯದು ಪರಭಾಷೆಗಳ
ಬೇಸರವ ? ಜೀವನದ ಮತ್ಸರವ
ಮರೆತು ಕನ್ನಡದ ಕಲಾಸಿರಿಯನ್ನು
ಸೊಬಗುಗೊಳಿಸ ವ ತಾಯೆ !
ಕನ್ನಡನಾಡಿನೆಳ್ಗೆಯನು ನೋಡಿ
ಸುಖಪಡುವ ತಾಯೆ ! ಪರಭಾಷ
ದೇಳ್ಗೆಯನು ಕಂಡು ಮನದಿ ಮತ್ಸರ
ಪಡದ ತಾಯೆ ! ಕನ್ನಡದ ಕಲಾ
ಸುಂದರದಲ್ಲವಲ್ಲಿಯನು ಕುಡಿ
ಕುಡಿಯಾಗಿ ನಾಡಿನಲಿ ಬೀಳ್ಕೊಟ್ಟು
ಬೆಳಗಿಸುವ ತಾಯೆ ! ಕವಿವರರ
ಪದ್ಯದಲಿ ಪ್ರಜ್ವಲಿಪ ತಾರೆ ! !
ಸದ್ಗುಣಗಳ ಕಣಿಯೆ ! ! ಎಲ್ಲಿರುವೆ ?
ಬಾರಮ್ಮ ಕನ್ನಡದ ತಾಯೆ ;
ಎಲ್ಲಿರುವೆ ಬಾರಮ್ಮ !

ಉಪದೇಶಾಮೃತವೆಂಬ

ಶ್ರೀ ಸೀತಾರಾಮಸ್ವಾಮಿಗೆ ಅಷ್ಟೋತ್ತರ ಪೂ ಜಾ ಸ ಮ ರ್ಪ ಣ

(ಶಿವಾನಂದ ಸರಸ್ವತಿಯವರ ಲೇಖನಾನುವಾದ)

1. ನಾನು ಯಾರು ಎಂಬುದನ್ನು ವಿಚಾರಣೆ ಮಾಡಿ ಆತ್ಮಸಾಕ್ಷಾತ್ಕಾರವನ್ನು ಹೊಂದು.
2. ಇತರರ ಯೋಗ್ಯತೆಯನ್ನು ಅರಿತು ಅವರೊಂದಿಗೆ ಸ್ನೇಹ ಬೆಳಿಸು.
3. ಒಬ್ಬನೊಂಡಿಗೆ ಸ್ನೇಹ ಮಾಡಿದನಂತರ ಆ ಮರಣಾಂತ ಸ್ನೇಹವನ್ನು ಬಿಡದಿರು.
4. ಯಾವದಾದರೂ ಲಾಭದೃಷ್ಟಿಯಿಂಡ ತಪ್ಪು ಕಾರ್ಯಗಳನ್ನು ಮಾಡಬೇಡ.
5. ಪೌರುಷ ವಾಕ್ಯಗಳನ್ನು ನುಡಿಯಬೇಡ.
6. ಮನಪೂರ್ತಿಯಾಗಿ ಧರ್ಮಕಾರ್ಯಗಳನ್ನು ಮಾಡಲೆಳಿಸು.
7. ಪುಣ್ಯಕಾರ್ಯಗಳನ್ನೇ ಮಾಡುವನಾಗು.
8. ಅಪರಾಧಗಳನ್ನು ಕ್ಷಮಿಸುವಿಕೆ, ಶಾಂತಚಿತ್ತತೆ, ಯುಕ್ತಾಯುಕ್ತ ವಿಚಾರ ಇವುಗಳ ಮೂಲಕ ಕೋಪವನ್ನು ಉಪತಮನಗೊಳ್ಳಿಸಿಕೊಳ್ಳುವನಾಗು.
9. ಒಬ್ಬರು ಧರ್ಮಕಾರ್ಯವನ್ನು ಮಾಡುವಾಗ ಅದಕ್ಕೆ ಅಡಚಣೆಗಳನ್ನು ತಂದೊಡ್ಡದಿರು.
10. ತಂದೆತಾಯಿಗಳು ಪ್ರತ್ಯಕ್ಷ ದೈವಗಳೆಂಬ ಭಾವಗಳನ್ನು ಪರಿವರ್ತಿಸು.
11. ಈ ಕಾರಣದಿಂದ ಅವರನ್ನು ಪೂಜಿಸು, ಪೋಷಿಸು.
12. ಯಾರಿಗೂ ಹಾನಿಯನ್ನುಂಟುಮಾಡಬೇಡ.
13. ಮಹಾತ್ಮರ ಉಪದೇಶವನ್ನು ಆಲಿಸಿ ಅವುಗಳಂತೆ ನಡೆದುಕೋ.
14. ಇತರರ ಪದಾರ್ಥಗಳನ್ನು ಅಪಹರಿಸಬೇಡ.
15. ಶಾಸ್ತ್ರ ಸಮ್ಮವಾದ ಸತ್ಕಾರ್ಯವನ್ನಾಚರಿಸು.
16. ಅಜ್ಞಾನವನ್ನು ಆತ್ಮಜ್ಞಾನದಿಂದ ತೊಲಗಿಸು.
17. ಸತ್ಸಹವಾಸನನ್ನು ಮಾಡು.
18. ದುಷ್ಟರ ಸಹವಾಸವನ್ನು ಮಾಡಬೇಡ.
19. ಪ್ರಪಂಚಕ್ಕೆ ಅನುಗುಣವಾಗಿ ನಡೆದುಕೋ.
20. ಶತ್ರುಗಳನ್ನು ಎಂದಿಗೂ ನಂಬಬೇಡ.
21. ಋಷಿಗಳೂ ಶಾಸ್ತ್ರಗಳೂ ಬೋಧಿಸುವ ಜ್ಞಾನವನ್ನು ಅನುಸರಿಸು.
22. ತಂಟರೊಂಡಿಗೆ ಸ್ನೇಹವನ್ನು ಮಾಡಬೇಡ.
23. ಅಮಿತವಾಗಿ ಭುಜಿಸಬೇಡ.
23. ಮಹಾತ್ಮರೊಂದಿಗೆ ಅತಿ ಸಂಭಾಷಣೆಯನ್ನು ಮಾಡಬೇಡ.
25. ಪಕ್ಷಪಾತಿಯಾಗಿರಬೇಡ.
26. ಸತ್ವಗುಣಗಳುಳ್ಳ ಯೋಗ್ಯನಾಗು.
27. ಸತ್ಯಮಾರ್ಗ ಪ್ರವರ್ತಕನಾಗು.
28 ಮಾತನಾಡುವಾಗ ನಡನಡುವೆ ವಿಷಯಗಳನ್ನು ಬಿಟ್ಟುಬಿಡಬೇಡ.
29. ಮಾತನಾಡುವುದಕ್ಕೆ ಮುಂಚೆ ವಿಷಯಗಳನ್ನು ಒರೆದಿಟ್ಟುಕೋ.
30. ಅಧ್ಯಾತ್ಮನ ಸಂಬಂಧ ವಿಷಯಗಳನ್ನೊಡಗೊಂಡ ಗ್ರಂಥಗಳನ್ನು ದಿನಂಪ್ರತಿ ಪಠಿಸು.

(ಮುಂದುವರಿಯುವುದು)

ವಿನೋದರಂಜಿನಿ ನಂ. 5

ಬಹುಮಾನ ಪಡೆದವರ ಹೆಸರು

ಸರಿಯಾದ ಉತ್ತರ ಕಳುಹಿಸಿದ 4 ಮಂದಿಗೆ ತಲಾ ರೂ. 15 ಬಹುಮಾನ.

ಎಂ. ಶಾಮರಾವ್ ಕೋಲಾರ, ಶ್ರೀ ಸೀತಮ್ಮ ಬೆಂಗಳೂರು, ಸಿ. ಶ್ರೀನಿವಾಸರಾವ್, ಬಿ, ನಂಜುಂಡಯ್ಯ ಮೈಸೂರು.

1 ತಪ್ಪಿನ ಉತ್ತರ ಕಳುಹಿಸಿದವರಿಗೆ ತಲಾ ರೂ. 4 ಬಹುಮಾನ.

ಶ್ರೀ ಪದ್ಮಾವತಿಬಾಯಿ, ಕೆ. ರಾಮಕೃಷ್ಣ ಶಾಸ್ತ್ರಿ, ಕೆ. ಕೃಷ್ಣಮೂರ್ತಿ, ಎ.ಗೋಪಾಲಕೃಬಿ ಪುಟ್ಟಸ್ವಾಮಿ, ಮೈಸೂರು. ಎಸ್. ರಾಮುಸ್ವಾಮಿ ಬೆಂಗಳೂರು.

2 ತಪ್ಪಿನ ಉತ್ತರ ಕಳುಹಿಸಿದವರಿಗೆ ತಲಾ 12 ಆಣೆ ಬಹುಮಾನ.

ಶ್ರೀ ನಾಗರತ್ನಮ್ಮ ಬಳ್ಳಾರಿ, ಆರ್. ಅಶ್ವತ್ಥಯ್ಯ ಸಿರಾ, ಎಸ್. ಎಸ್. ಪ್ರಸನ್ನ. ಪಿ. ಬಿ. ಪಾರ್ಥಸಾರಥಿ, ಎಸ್. ಆರ್. ಕೃಷ್ಣಸ್ವಾಮಿ, ಎಸ್. ಶ್ರೀಕಂಠಯ್ಯ ಹೆಚ್. ಎಸ್. ರಾಮಸ್ವಾಮಿ ವಿ. ಎಸ್. ಶಾಂತಾಬಾಯಿ ಮೈಸೂರು, ಸಿ. ಎಸ್ ಭೋಜಸೊಂಡೂರು, ಸಿ. ನರಸಿಂಹಮೂರ್ತಿ, ಶ್ರೀ ಶಾಂತಾಬಾಯಿ, ಎಸ್. ಶ್ರೀನಿವಾಸಮೂರ್ತಿ ಎಸ್. ಗೋಪಾಲಸ್ವಾಮಿ, ಬೆಂಗಳೂರು.

3 ತಪ್ಪಿನ ಉತ್ತರ ಕಳುಹಿಸಿದವರು ನಂ. 6 ಕ್ಕೆ ತಾವು ಕಳುಹಿಸುವ ಪೇಡ್ ಕೂಪನ್ ಜೊತೆಗೆ ಒಂದು ಫ್ರೀ ಕೂಪನ್ನನ್ನು ಉಚಿತವಾಗಿ ಕಳುಹಿಸಬಹುದು.

ಸಿ. ರಾಮಣ್ಣ ಚಿಕ್ಕಮಗಳೂರು, ಯಂ. ಶಿವಲಿಂಗೇಗೌಡ, ಮಿಂಚೇರಿ. ಹೆಚ್. ಶಂಕರನಾರಾಯಣ ರಾವ್ ದೊಡ್ಡನೇಟಿಕುರ್ಕೆ, ಹೆಚ್. ಎಂ ಮುನಸ್ವಾಮಿನಾಯಿಕ್ ವೇಗರವಳ್ಳಿ, ಹೆಚ್ ಎಸ್. ನರಸಿಂಹಮೂರ್ತಿ, ಚಿಕ್ಕನಾಯ್ಕನಹಳ್ಳಿ. ಎಂ. ಎಲ್. ಪದ್ಮನಾಭ, ಬೊಂಬಾಯಿ. ಸಿ. ಎಸ್. ಶಾಸ್ತ್ರಿ, ಶ್ರೀ ಸರೋಜಮ್ಮ, ಹೆಚ್. ಎಸ್. ವಿ. ಮೂರ್ತಿ, ಆರ್. ಎಸ್. ಕಮಲಾಬಾಯಿ, ಮೈಸೂರು

ಬಹುಮಾನಗಳನ್ನು ತಾ || 30 ನಂತರ ಪಾವತಿ ಮಾಡಲಾಗುತ್ತೆ. ಅಷ್ಟೊರೊಳಗೆ ಬೇಕಾದವರು ನಂ. 6 ಕ್ಕೆ ಅಡ್ಜೆಸ್ಟ್ ಮಾಡಬಹುದು. ತಾ || 25 ನಂತರ ನಂ. 5ರ ರಿಕಾರ್ಡ್, ಕೂಪನ್ ಯಾವುದನ್ನೂ ನವ್ ಲ್ಲಿಟ್ಟುಕೊಂಡಿರುವುದಿಲ್ಲ.

ವಿದ್ಯಾರ್ಥಿ ಪಜಲ್ ನಂ 14 ಕ್ಕೆ ಸಲಹೆ

By—N. V. Krishnaswamy.

ಎಡದಿಂದ ಬಲಕ್ಕೆ— 2 ಶೀಲವಂತ, ಬಲವಂತ, ಛಲವಂತ 6 ಕ್ಷೇತ್ರ. ಯಾತ್ರ, 9 ಅಬಲೆ ಸಬಲೆ, ಪ್ರಬಲೆ 10 ಸಹಿ. ಕಹಿ 18 ಸಮತೆ, ಸತ್ಯತೆ.

ಮೇಲಿನಿಂದ ಕೆಳಕ್ಕೆ—1 ಕಾಲಕ್ಷೇಪ, ಕಾಲಯಾಪ 2 ಶೀಲ, ಛಲ, ಬಲ 5 ಅನುಕರಣ. ಅನುಸರಣ 13 ವಾಕ್ಯ, ವಾರ್ತೆ, ವಾಣಿ, ವಾದ, ವಾಜ.

ಸೂಚನೆ—ಸ್ಥಿರಪದಗಳು ಕಳೆದ ವಾರ ಪ್ರಕಟವಾಗಿದೆ. ಒರೇ ವಿಮರ್ಶನೀಯ ಪದಗಳನ್ನು ಕೊಡಲಾಗಿದೆ. ಮುಂದಿನ ವಾರ ವಿನೋದರಂಜಿನಿ ನಂಬರು 6ರ ಸಲಹೆಯನ್ನು ಕೊಡಲಾಗುತ್ತೆ.

ಪಕ್ಷ-ಪ್ರತಿಪಕ್ಷಗಳು

[ಹಿಂದಿನ ಪ್ರಟದಿಂದ ಮುಂದುವರಿದುದು]

ನಮ್ಮ ಪ್ರಜಾಪ್ರತಿನಿಧಿ ಸಭೆಯ ಈ ಪಕ್ಷಗಳವರಲ್ಲಿ ಇಂತಹ ಸಾಮರಸ್ಯಭಾವವೇ ಹೆಚ್ಚಾಗಿ ಎದ್ದು ಕಾಣುತ್ತದೆ. ಒಂದು ಪಕ್ಷದವರು ಯಾವುದಾದರೊಂದು ವಿಷಯವನ್ನು ಮುಂದೆ ತಂದರೆ ಆ ವಿಷಯವು ದೇಶಕ್ಕೆ ಕ್ಷೇಮಕರವೋ ಅಪಾಯಕರವೋ ಎಂಬುದನ್ನು ವಿಮರ್ಶಿಸುವುದಕ್ಕಿಂತಲೂ ಇನ್ನೊಂದು ಪಕ್ಷದವರು ತುದಿರವುದನ್ನು ಖಂಡನೆ ಮಾಡಬೇಕೆಂಬುದನ್ನೇ ಗುರಿಯಾಗಿಟ್ಟುಕೊಂಡು ವರ್ತಿಸುವುದು ಕಂಡುಬರುತ್ತಿದೆ. ಒಂದೆರಡು ಪಕ್ಷಗಳವರ, ತಾವು ಸರಕಾರವನ್ನು ಹೊಗಳುವುದರಿಂದಲೇ ತಮಗೆ ಸರಮ ಪುರುಷಾರ್ಥಗಳೆಲ್ಲಾ ದೊರಕುವುವು ಎಂಬುದಾಗಿ ತಿಳಿದುಕೊಂಡಿರುವಂತೆ ಕಾಣುತ್ತದೆ. ಸರಕಾರದವರನ್ನು ಹೊಗಳಕೂಡದೆಂಬುದು ನಮ್ಮ ಅಭಿಪ್ರಾಯವಲ್ಲ. ಅನೇಕ ಸಂದರ್ಭಗಳಲ್ಲಿ ಸರಕಾರದವರು ಅಭಿನಂದನಾರ್ಹರೂ, ವಂದನಾರ್ಹರೂ ಆಗಿರುತ್ತಾರೆ. ಅಂಥ ಸಂದರ್ಭಗಳಲ್ಲಿ ಖಂಡಿತವಾಗಿಯೂ ಅವರನ್ನು ಅಭಿನಂದಿಸಬೇಕು, ವಂದಿಸಬೇಕು ಮತ್ತು ಅವರು ಕೈಗೊಂಡ ಕಾರ್ಯಕ್ರಮಗಳಲ್ಲಿ ಯುಕ್ತವಾದ ಸಲಹೆಗಳನ್ನು ಕೊಡಬೇಕು. ಅವರೊಡನೆ ಸಹಕರಿಸಬೇಕು. ಆದರೆ, ಒಳ್ಳೇದು ಕೆಟ್ಟದ್ದು ಎಂಬ ವಿವೇಚನೆಯೂ ಇಲ್ಲದೇ ಅವರನ್ನು ಹೊಗಳುವುದಾಗಲಿ ಅಥವಾ ದೂಷಿಸುವುದಾಗಲಿ ಕೂಡದು. ನ್ಯಾಯನ್ಯಾಯವಿವೇಚನೆಯಿಲ್ಲದೇ ಸರಕಾರದವರು ಮಾಡತ್ತಿರುವುದೆಲ್ಲವನ್ನು ಖಂಡಿಸುತ್ತಾ ಇದ್ದರೆ ತಾನೊಬ್ಬ ಪ್ರಜಾಮುಖಂಡನಾಗಬಲ್ಲನೆಂದು ತಿಳಿದುಕೊಂಡವರೂ ಇರುತ್ತಾರೆ. ಅದು ಶುದ್ಧ ತಪ್ಪುತಾರಿ. ಅಂಥವರಿಂದ ದೇಶಕ್ಕೆ ಯಾವ ಉಪಯೋಗಕರವೂ ಆಗತೀರದು.

ಆದುದರಿಂದ ಪಕ್ಷಗಳವರು ತಮ್ಮತಮ್ಮೊಳಗೆ ರಾಜಕೀಯ ಭಿನ್ನಾಭಿಪ್ರಾಯಗಳು ಎಷ್ಟೇ ಇದ್ದರೂ ಸಾರ್ವಜನಿಕಕಾರ್ಯಕರ್ತರಲ್ಲಿ ಪರಸ್ಪರ ಸಹಕಾರವನ್ನು ಮಾಡಿರಬೇಕಾಗುತ್ತದೆ. ಅಗತ್ಯವು ಅಭಿಪ್ರಾಯಭೇದಗಳಿಂದ ಹುಟ್ಟಿದ ಜಡ್ಡೆಯು ದೇಶದ ಹಿತಕ್ಕೆ ಸಾಧಕವಾಗುವಂತೆ ಮಾಡಿಕೊಳ್ಳಬೇಕು. ಆ ರೀತಿ ಶರಾವ ಸಂದರ್ಭದಲ್ಲಿ ಪಕ್ಷಗಳೂ ಇರಕತ್ಕಂಥಾದ್ದು ಪ್ರಶಂಸನೀಯವಾಗಿರುತ್ತದೆ. ಹಾಗಿಲ್ಲದೆ ದೇಶದ ಹಿತವನ್ನು ಲಕ್ಷಿಸದೇ ಒಬ್ಬರನ್ನೊಬ್ಬರು ಖಂಡಿಸುವುದೇ ತಮ್ಮ ಗುರಿಯಾಗಿಟ್ಟುಕೊಂಡರೆ ಆ ಪಕ್ಷಗಳಿಂದ ದೇಶಕ್ಕೆ ಅಪಾರ ಹಾನಿಯಾಗುವುದೇ ಹೊರತು ಕಿಲಾಂಶವೂ ಉಪಯೋಗವಾಗಲಾರದು.

ಮುಖ್ಯವಾಗಿ ಪ್ರಜಾಪ್ರತಿನಿಧಿಸಭೆ ಅಥವಾ ನ್ಯಾಯವಿಧಾಯಕ ಸಭೆಗಳಲ್ಲಿ ಇರಕತ್ಕ ಪಾರ್ಟಿಗಳಿಗೆ ಅಭಿಪ್ರಾಯ ಭೇದವಿಷ್ಟೇ ಇದ್ದರೂ ಸಾರ್ವಜನಿಕ ಹಿತದ ಪರಮೋದ್ದೇಶವು ಒಂದೇ ಇರಬೇಕೆನ್ನುವುದು ಒತ್ತಿ ಹೇಳಬೇಕಾಗಿದೆ.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ವಿಶಾಟಿಂಗು ಈ ತಿಂಗಳು 22 ರಿಂದ ನಡೆಯುವುದು.

ಸಂಸ್ಥಾನದ ವರ್ತಮಾನಗಳು

ಮೈಸೂರು ಶ್ರೀಮನ್ಮಹಾರಾಜರವರು ಜುಲೈ 8 ನೇ ತಾರೀಖು ಬೆಳಿಗ್ಗೆ ಬೆಂಗಳೂರಿನಿಂದ ಕಾರಿನಲ್ಲಿ ಮಾರ್ಗವಾಗಿ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು.

ಂ ಂ ಂ

ಡ್ಯೂಕ್ ಆಫ್ ಗ್ಲಾಸ್ಟರ್‌ರವರು ಮೈಸೂರು ಯುರೋಡನೆ ಈ ತಿಂಗಳು ಕೊನೆಯ ಭಾಗದಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ಗೊತ್ತಾಗಿದೆ. ಅವರು ಬೆಂಗಳೂರಿಗೂ ಮತ್ತು ಮೈಸೂರಿಗೂ ಭೇಟಿ ಕೊಡಬಹುದು.

ಂ ಂ ಂ

ಮೈಸೂರು ಸರ್ಕಾರದ ರೇಷ್ಮೆ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಹೆಚ್ ಎಸ್. ಗೋವಿಂದರಾಯರನ್ನು ಇಂಡಿಯಾ ಸರ್ಕಾರದ ರೇಷ್ಮೆ ಸಲಹೆಗಾರರಾಗಿ ದೊಡ್ಡ ಹುದ್ದೆಗೆ ಇಷ್ಟರಲ್ಲಿಯೇ ನೇಮಿಸಲಾಗುವುದೆಂದು ವದಂತಿಯಿದೆ.

ಂ ಂ ಂ

ಜಯಪುರ ಸಂಸ್ಥಾನದ ದಿವಾನರಾಗಿ ಸೇವಾ ಸಲ್ಲಿಟ್ಟಿರುವ ಸರ್ ಮಿರ್ಜಾ ಎಂ. ಇಸ್ಮೇಲರು ತಮ್ಮ ಪ್ರೈವೇಟ್ ಸೆಕ್ರೆಟರಿಗಳಾದ ವಿ|| ಎರಿಂ ಡಿಕಾಸ್ಟ್ರಾರವರೊಡನೆ 15 ನೇ ತಾರೀಖು ರಾತ್ರಿ ಗುಂತಕಲ್ ಪೆಯಿಲ್‌ನಲ್ಲಿ ಪ್ರಯಾಣ ಬೆಳೆಸಿದರು.

ಂ ಂ ಂ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಸುಬ್ಬರಾಯರು ಕಳೆದ ಸೋಮವಾರ ಪ್ರಾತಃಕಾಲ ಸಂತೇಪೇಟೆಗೆ ಭೇಟಿಯಿತ್ತು ಕೆಲವು ಪ್ರಮುಖ ಸಕ್ಕರೆ ವರ್ತಕರ ಮಂಡಿಗಳನ್ನು ಸರೀಕ್ಷಿಸಿದರು. ಸಕ್ಕರೆಯನ್ನು ನಗರದಲ್ಲಿ ಈಗ ಏನೆಯೊಂದಕ್ಕೆ ಎಂಟೂವರೆ ಆಣೆಗಳಂತೆ ಮಾರಬೇಕೆಂದು ಬೆಲೆಯನ್ನು ನಿರ್ಧರಿಸಿ ಸುಮಾರ ೩೪೦ ಸಕ್ಕರೆ ಮೂಟೆಗಳನ್ನು ವ್ಯಾಪಾರಕ್ಕೆ ತೆಗೆಸಿಕೊಟ್ಟರು. ಅಲ್ಲದೆ ಹತ್ತು ಪ್ರಮುಖ ವರ್ತಕರುಗಳಿಗೆ ಕಾರ್ಖಾನೆಯಿಂದ ಸಕ್ಕರೆ ತರಿಸಿ ಸಣ್ಣ ಅಂಗಡಿಯವರುಗಳಿಗೆ ಹಂಚಿ ಮಾರಲು ಏರ್ಪಾಡು ಮಾಡಿದರು. ಇದರಿಂದ ಇಲ್ಲಿಯವರಿಗಿದ್ದ ಸಕ್ಕರೆ ಅಭಾವವು ತಪ್ಪಿದೆ.

ಂ ಂ ಂ

ಮೈಸೂರಿನ ವರ್ತಕರಾದ ವಿ|| ಗೌಸ್ ಮೊಹಿಯುದ್ದೀನ್ ಎಂಬುವರ ಬಳಿ ನೌಕರರಾಗಿರುವ ಜಾಬಾಜಾರ್ ಎಂಬಾತನು ಶ್ರೀ ತಿಮ್ಮಣ್ಣ ಎಂಬುವರಿಗೆ ಸಕ್ಕರೆಯನ್ನು ನಿರ್ದಿಷ್ಟವಾದುದಕಿಂತ ಹೆಚ್ಚು ಬೆಲೆಗೆ ಮಾರಿ ಬಿಲ್ ಕೊಡಲು ನಿರಾಕರಿಸಿದರೆಂಬ ಅಪವಾದದ ಮೇಲೆ ಮಂಡಿ ಪೋಲೀಸಿನವರು ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಹೂಡಲಾಗಿದ್ದ ಮೊಖದ್ದಮೆಯನ್ನು ಸಿಟಿ ಮ್ಯಾಜಿಸ್ಟ್ರೇಟರಾದ ಎ. ಸಿ. ನಿರ್ವಾಣಿಸೌಡರು ವಿಚಾರಣೆ ಮಾಡಿ ಆದುರುಜುವಾತಾದುದರಿಂದ ಅಪರಾಧಿಗೆ ಕೋರ್ಟು ಏಳುವವರೆಗೂ ಸಜಾ ಮತ್ತು ೧೫೦ ರೂಪಾಯಿ ಜುಲ್ಮಾನೆ ವಿಧಿಸಿದರು.

ವರ್ತಮಾನ ಸಂಗ್ರಹ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ವಿಾಟಿಂಗು ವರ್ಧಾದಲ್ಲಿ ಜುಲೈ ತಿಂಗಳು ಮೊದಲನೆ ವಾರದಲ್ಲಿ ಸೇರುವಂತೆ ಏರ್ಪಡಿಸಲಾಗಿದೆ.

ಂ ಂ ಂ

ಬಾಬು ಕಬಾಸ್ ಚಂದ್ರಬೋಸ್‌ರವರು ಈ ಚೆಗೆ ಹೆರ್ ಹಿಟ್ಲರನ್ನೂ, ಸಿನಾರ್ ಮುಸೋಲಿನಿಯವರನ್ನೂ ಭೇಟಿ ಮಾಡಿದ್ದರೆಂದೂ ಅನಂತರ ಅವರು ಈಗ ಬರ್ಲೀನಿಯಾನಿಗೆ ಬಂದಿರುವರೆಂದೂ ಲಂಡನಿನ ಸಮಾಚಾರದಿಂದ ಗೊತ್ತಾಗಿದೆ.

ಂ ಂ ಂ

ಡ್ಯಾಮಾ ಸಬ್‌ಡವಿಜನಿಗೆ ಸೇರಿದ ಮಾಡಿಯಾಂಡ ಎಂಬ ಗ್ರಾಮದಲ್ಲಿ ಒಂದು ಮಾವಿನ ಮರದ ಕೆಳಗೆ ಮಂಚದ ಮೇಲೆ ಮಲಗಿದ್ದ ಸು. ಮೂರು ಎರಡು ವರ್ಷದ ಮಗುವಿಗೆ ಕೆಂಪು ಇರುವೆಗಳು ಕಚ್ಚಿದ್ದರಿಂದ ಪ್ರಾಣಬಿಟ್ಟಿತು. ಕೆಂಪು ಇರುವೆಗಳು ಮಗುವಿನ ಮೂಗಿನ ಮೂಲಕ ಹೊಟ್ಟೆಯೊಳಕ್ಕೆ ನುಗ್ಗಿ ಕಚ್ಚಿ ಈ ರೀತಿ ಅನಾಹುತವುಂಟಾಯಿತೆಂದು ಹೇಳಲಾಗಿದೆ.

ಂ ಂ ಂ

ಇಂಡಿಯಾದ ನುಂದಿನ ವೈಸರಾಯರಾಗಿ ಯಾರನ್ನು ನೆಮಿಸಬೇಕೆಂಬ ಒಗ್ಗೆ ವಿ || ಚರ್ಚಿಲರು ಮಂತ್ರಿಮಂಡಲದಲ್ಲಿ ಸಮಾಲೋಚನೆ ಮತ್ತು ಪರಿಶೀಲನೆ ನಡೆಯುತ್ತಿದೆ. ಯುದ್ಧ ಮುಗಿಯುವವರೆಗೆ ಈಗಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರಿಗೆ ವೈಸರಾಯ್ ಪದವಿಯ ಅವಧಿಯನ್ನು ಒಡಾಣೆ ಮಾಡುವ ಸಂಭವವಿದೆಯೆಂದು ತಿಳಿದು ಬಂದಿದೆ.

ಂ ಂ ಂ

"ಸ್ಕಾಚ್ಡ್ ಅರ್ತ್" ಪಾಲಿಸಿಯನ್ನು ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರಕೂಡದೆಂದು ಸರ್ಕಾರವನ್ನು ಪ್ರಾರ್ಥಿಸಿ ಶ್ರೀ ಎಂ. ಎಸ್. ಜೋಯಿಸರು (ಕಾಂಗ್ರೆಸ್) ಒಂದು ಅರಿಕೆಯನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ತಂದರು. ದಿವಾನ್ ಪ್ರೈಸಿಡೆಂಟರು ಉತ್ತರ ಕೊಡುತ್ತಾ ಇದು ಅನಾವಶ್ಯಕವಾದ ಸಂಶಯದಿಂದ ಕೂಡಿದ ಪ್ರಶ್ನೆ ಎಂದುಬಿಟ್ಟರು.

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಕಳೆದ 1 ನೇ ತಾರೀಖಿನಿಂದ 12 ದಿವಸಗಳು ಬೆಂಗಳೂರು ಶ್ರೀ ಪುಟ್ಟಣ್ಣಶೆಟ್ಟಿ ಟೌನ್ ಹಾಲಿನಲ್ಲಿ ದಿವಾನ್ ರಾಜಸಂತ್ರಪ್ರವೀಣ ಎಸ್. ವಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು, ಬೆಂಗಳೂರಿನಲ್ಲಿ ನಡೆದದ್ದು ಇದೇ ಮೊದಲು ಸಭೆಯಾದ್ದರಿಂದ ಕ್ರಮಗಳು ಅತಿ ಚನ್ನಾಗಿ ನಡೆಯಿತು. ಅಲ್ಲಿ ಚರ್ಚಿಸಲ್ಪಟ್ಟ ಅನೇಕ ವಿಷಯಗಳನ್ನು ಕುರಿತು ಕಳೆದ ಮತ್ತು ಈ ವಾರಗಳಲ್ಲಿ ವಿಸ್ತಾರ ಲೇಖನಗಳನ್ನು ಪ್ರಕಟಿಸಲಾಗಿದೆ ಮಿಕ್ಕ ವಿಷಯಗಳನ್ನು ಮುಂದಿನ ವಾರ ಪ್ರಕಟಿಸುತ್ತೇವೆ.

Sri Parashuram Hall

ನಮ್ಮಲ್ಲಿ ಎಲ್ಲಾ ತರಹ ಕೋಟ್ಸ್, ಪಂಟಿಂಗ್ಸ್ ಟ್ರವಲ್ಸ್, ಅಂಬ್ರೆಲಾಸ್ ಮತ್ತು ಎಲ್ಲಾ ಸೈಜು ಕುಸ್ತಂ ಹಾಸಿಗೆ ದಿಂಬುಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಬಟ್ಟೆಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಅಂದವಾಗಿಯೂ ಮನಸ್ಸು ಒಪ್ಪುವಂತೆಯೂ ಹೊಲೆದು ಕೊಡುತ್ತೇವೆ

ವಿಳಾಸ:— ಶ್ರೀ ಪರಶುರಾಂ ಹಾಲ್
ಸಯ್ಯಾಜಿರಾವ್ ರೋಡ್, :: ಮೈಸೂರು,
ಫೋ—ಧೋಂಡೋಜಿರಾವ್ ಅಂಡ್ ಸನ್ಸ್

Sri
Mahalakshmi Hall
Tailors
Outfitters
Breeches Specialists
Sayyaji Rao Road, Mysore

ನಿಮ್ಮ ಫೌಂಟೆನ್ ಪೆನ್ನುಗಳ
ಆಯುಸ್ಸು ಪೂರೈಸಿತೆ!

ನಮ್ಮಲ್ಲಿಗೆ ಬಂದರೆ ಪುನರ್ಜೀವನ ಕೊಡಲ್ಪಡುತ್ತೆ. ಎಲ್ಲಾ ಫೌಂಟೆನ್ ಪೆನ್ನುಗಳಿಗೂ ಅವುಗಳ ಸ್ಪೇರ್‌ಪಾರ್ಟ್ಸ್‌ಗಳಿಗೆ ನಮ್ಮಲ್ಲಿಗೆ ಬನ್ನಿ.

ಮೊಕ್ತಾರ್ ಅಂಡ್ ಕೋ.
ಲ್ಯಾನ್ಸ್‌ಡೌನ್ ಬಜಾರ್. ಮೈಸೂರು.

ಅಕ್ಕರ
ಸಾಮಾಜಿಕ
— ಭಾವಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. 7 ಆಣೆ ಸ್ಟ್ಯಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸುತ್ತೇವೆ. ಸತ್ಯವಾದಿ ಆಫೀಸ್. ಮೈಸೂರು

When you desire to buy or sell
Houses & Sites
apply to
The Satyavadi Ltd.., Mysore

For Good Printing
CONSULT.
Saraswati Printing Press

For Luscious Menu and
Fine Coffee and Tea
Sastry's Coffee Rooms
Chamarajapuram, Mysore

ಸತ್ಯವಾದಿ ವಾರಪತ್ರಿಕೆಗೆ
— ಚಂದಾದಾರರಾಗಿರಿ —

ವಾರ್ಷಿಕಚಂದಾ "ಎ. ಬಿ." ಸೆಕ್ಷನ್ ಅಂಚೆ ವೆಚ್ಚಸೇರಿರೂ 1–12–0. 3 ತಿಂಗಳಿಗೆ 8 ಆಣೆ
ವಿ. ಪಿ. ಪದ್ಧತಿ ಇಲ್ಲ

—— ಆರ್ಡರ್ ಫಾರಂ ——

ಸ್ವಾಮಿ,
ತಮ್ಮ ವಾರಪತ್ರಿಕೆಗೆ ನನ್ನನ್ನು ವಾರ್ಷಿಕ ಚಂದಾದಾರನನ್ನಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕಾಗಿ ಕೋರುತ್ತೇನೆ. ಅದಕ್ಕಾಗಿ ವಾರ್ಷಿಕ ಚಂದಾವಾವ ರೂ 1–12–0 ಯನ್ನು ಮನಿಯಾರ್ಡರ್ ಅಥವಾ ಪೋಸ್ಟಲ್‌ಆರ್ಡರ್ ಮೂಲಕ ಇವರೊಂದಿಗೆ ಹಣ ರವಾನಿಸಿದ್ದೇನೆ.
ಹೆಸರು
ವಿಳಾಸ

Edited, Printed & published by M.S. Krishna Rao, at the Satyavadi Press Chamaraja Agrahar. Mysore.

SHAKTI SUDHA

Sanjivini in complete form
Holy sages of Ind proclaim so.
As blood purifier it stands unrivalled
Know this secret, use and benefit.
Turns away nervous debility and premature death
Improves health, vigour and vitality.
Senelity disappears,
Urinal disorders turn their backs.
Divine thoughts enter the system
Hellish ideas loose their hold
All this will be yours.

By the regular use of
SHAKTI SUDHA
Price Re. 1. Order now from—
'Shakti Sudha'
c/o Satyavadi Office
Chamarajpuram. Mysore
Mysore Agents—
Dhanvantari Vaidyasala
Lansdowne Buildings, Mysore

WANTED

A Second hand Cylinder Printing Machine. Demy Size, any make, should be in good working condition.
The Manager
Satyavadi Press, Mysore.

ಕ್ಷೀಸ್ರವಲ್ಲೀ ಪ್ರಕಟಿಸಲ್ಪಡುವ
ವಿನೋದ
ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ಹಾಸ್ಯ, ಸ್ಪರ್ಧೆ, ಕಥೆ, ಸಿನಿಮಾ ಮುಂತಾದವಿಷಯಗಳನ್ನೊಳಗೊಂಡಿರುತ್ತೆ. ಇಷ್ಟವಾದರೂ ಬೆಲೆಸಿ ಕೈ.

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ. ಕೂಡಲೇ ಬರೆಯಿರಿ—
ಮೊಕ್ತಾರ್ ಅಂಡ್ ಕೋ.,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಪುರುಷರ ಬಲ ಯೌವನಗಳಿಗಾಗಿಯೂ, ಸ್ತ್ರೀಯರ ಸಂತಾನ ಸೌಂದರ್ಯಗಳಿಗಾಗಿಯೂ
ಅನಾದಿಯಿಂದಲೂ ಪ್ರಯತ್ನಿಸುತ್ತಿರುವುದುಂಟು. — — ಈ ಕೋರಿಕೆಗಳು ಸಫಲಿಸಲು ಇಂದೇ ನಮ್ಮ

ಅಶ್ವಿನಿ ಸುಧಾ

— ಉಪಯೋಗಿಸಿರಿ —